# ಕರ್ನಾಟಕವಿಧಾನಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 552 (640) |
| **ಮಾನ್ಯ ಸದಸ್ಯರ ಹೆಸರು** | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| **ಉತ್ತರಿಸುವ ಸಚಿವರು** | ಉನ್ನತ ಶಿಕ್ಷಣ ಸಚಿವರು |
| **ಉತ್ತರಿಸಬೇಕಾದ ದಿನಾಂಕ** | 09.03.2026 |

| | **ಪ್ರಶ್ನೆ** | **ಉತ್ತರ** |
|---|---|---|
| **ಅ)** | ರಾಜ್ಯದಲ್ಲಿ ಒಟ್ಟು ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾಲಯಗಳಸಂಖ್ಯೆಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 32 ಸಾರ್ವಜನಿಕ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ವಿಶ್ವವಿದ್ಯಾಲಯಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ಕಳೆದ 3 ವರ್ಷಗಳಲ್ಲಿ ವಿಶ್ವವಿದ್ಯಾಲಯಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದ ಒಟ್ಟು ಅನುದಾನ ಎಷ್ಟು; | ಕಳೆದ 3 ವರ್ಷಗಳಲ್ಲಿ ವಿಶ್ವವಿದ್ಯಾಲಯಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಕಂಡತಿದೆ; (see table below) |

| **ವರ್ಷ** | **ಬಿಡುಗಡೆಮಾಡಿದಅನುದಾನ (ರೂ.ಲಕ್ಷಗಳಲ್ಲಿ)** |
|---|---|
| 2023-24 | 4150.39 |
| 2024-25 | 3031.60 |
| 2025-26 | 2004.50 |

| | | |
|---|---|---|
| ಇ) | ವಿಶ್ವವಿದ್ಯಾಲಯಗಳ ಅಭಿವೃದ್ಧಿಗಾಗಿ ಸೂಕ್ತ ಅನುದಾನ ಬಿಡುಗಡೆ ಮಾಡದೇ ಇರುವುದರಿಂದ ವಿವಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಸಂಬಳ ಹಾಗೂ ಇನ್ನಿತರ ಸೌಲಭ್ಯಗಳಿಂದ ವಂಚಿತರಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ವಿಶ್ವವಿದ್ಯಾಲಯಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗುವ ಅನುದಾನವನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ಕೆಲಸಗಳಿಗೆ ಬಳಕೆ ಮಾಡಿಕೊಳ್ಳಬೇಕಿದ್ದು, ವಿಶ್ವವಿದ್ಯಾಲಯಗಳಲ್ಲಿ ಸರ್ಕಾರದಿಂದ ಸೃಜಿಸಿರುವ ಹುದ್ದೆಗಳಿಗಿಂತಲೂ ಹೆಚ್ಚುವರಿಯಾಗಿ ನೇಮಕ ಮಾಡಿಕೊಳ್ಳುವ ಹೊರಗುತ್ತಿಗೆ ನೌಕರರ ವೇತನವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸಬೇಕಿರುತ್ತದೆ. ಆದಾಗ್ಯೂ ಹೊರಗುತ್ತಿಗೆ ನೌಕರರ ವೇತನವನ್ನು ಸರ್ಕಾರದಿಂದ ಬಿಡುಗಡೆಗೊಳಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಗಳು ಸ್ವೀಕೃತವಾಗುತ್ತಿವೆ.<br><br>ವಿಶ್ವವಿದ್ಯಾಲಯಗಳ ಖಾಯಂ ಸಿಬ್ಬಂದಿಗೆ ಹೆಚ್.ಆರ್.ಎಂ.ಎಸ್., ಮುಖಾಂತರ ಸಂಪೂರ್ಣವಾಗಿ ವೇತನವನ್ನು ಸರ್ಕಾರದಿಂದ ಬಿಡುಗಡೆಗೊಳಿಸಲಾಗಿದೆ. |
| ಈ) | ಯಾವ ಕಾರಣಕ್ಕಾಗಿ ವಿವಿಗಳಿಗೆ ಸೂಕ್ತ ಅನುದಾನ ನೀಡಲಾಗುತ್ತಿಲ್ಲ (ಸಂಪೂರ್ಣ ಮಾಹಿತಿ ನೀಡುವುದು); | ವಿಶ್ವವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ವಿಶ್ವವಿದ್ಯಾಲಯದಲ್ಲಿ ಸಂಗ್ರಹವಾಗುವ ಆಂತರಿಕ ಸಂಪನ್ಮೂಲವನ್ನು ವಿಶ್ವವಿದ್ಯಾಲಯದ ಖರ್ಚು-ವೆಚ್ಚಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. |

| | | |
|---|---|---|
| | | ವಿಶ್ವವಿದ್ಯಾಲಯಗಳು ಶೇ.50ಕ್ಕೂ ಹೆಚ್ಚು ಆಂತರಿಕ ಸಂಪನ್ಮೂಲವನ್ನು ಅತಿಥಿ ಉಪನ್ಯಾಸಕರು/ ಹೊರಗುತ್ತಿಗೆ/ ತಾತ್ಕಾಲಿಕ/ ಬೋಧಕೇತರ ಸಿಬ್ಬಂದಿಯ ವೇತನ/ಕಛೇರಿ ನಿರ್ವಹಣೆಗಾಗಿ ವೆಚ್ಚ ಮಾಡುತ್ತಿದ್ದು, ಇದು ಅಸಮಾನವಾಗಿ ಹೆಚ್ಚಾಗಿರುತ್ತದೆ.<br><br>ವಿಶ್ವವಿದ್ಯಾಲಯಗಳು ಈ ವೆಚ್ಚಗಳನ್ನು ತರ್ಕಬದ್ಧಗೊಳಿಸಿ ಅನಗತ್ಯ ವೆಚ್ಚವನ್ನು ನಿಯಂತ್ರಿಸಿದಲ್ಲಿ ಶಾಸನಬದ್ಧ ವೆಚ್ಚಗಳಾದ ಹೊರಗುತ್ತಿಗೆ ಸಿಬ್ಬಂದಿ ವೇತನ, ಪಿಂಚಣಿ ಹಾಗೂ ಇತರೆ ವೆಚ್ಚಗಳನ್ನು ಸಂಪೂರ್ಣವಾಗಿ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದಲೇ ಭರಿಸಬೇಕಾಗಿದೆ. |

**ಸಂಖ್ಯೆ**: ಇಡಿ 56 ಯುಎನ್‌ಇ 2026

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು

<u>ಅನುಬಂಧ</u>

**ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 32 ಸಾರ್ವಜನಿಕ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ವಿಶ್ವವಿದ್ಯಾಲಯಗಳ ಜಿಲ್ಲಾವಾರು ಮಾಹಿತಿ /ವಿವರ ಈ ಕೆಳಕಂಡಂತಿದೆ.**

| ಕ್ರ.ಸಂ | ಜಿಲ್ಲೆ | ವಿಶ್ವವಿದ್ಯಾಲಯದ ಹೆಸರು |
|---|---|---|
| 1 | ಬೆಂಗಳೂರು | 1. ಬೆಂಗಳೂರು ವಿಶ್ವವಿದ್ಯಾಲಯ<br>2. ಬೆಂಗಳೂರು ನಗರ ವಿಶ್ವವಿದ್ಯಾಲಯ<br>3. ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ<br>4. ವಿಶ್ವೇಶ್ವಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ ಬೆಂಗಳೂರು<br>5. ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯ<br>6. ಡಾ.ಬಿ.ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ<br>7. ನೃಪತುಂಗ ವಿಶ್ವವಿದ್ಯಾಲಯ |
| 2 | ಕೋಲಾರ | 8. ಬೆಂಗಳೂರು ಉತ್ತರ ವಿಶ್ವವಿದ್ಯಾಲಯ |
| 3 | ತುಮಕೂರು | 9. ತುಮಕೂರು ವಿಶ್ವವಿದ್ಯಾಲಯ |
| 4 | ಬಳ್ಳಾರಿ | 10. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ |
| 5 | ವಿಜಯನಗರ ಜಿಲ್ಲೆ | 11. ಕನ್ನಡ ವಿಶ್ವವಿದ್ಯಾಲಯ ಹಂಪಿ |
| 6 | ಬೆಳಗಾವಿ | 12. ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ<br>13. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ |
| 7 | ಹಾವೇರಿ | 14. ಹಾವೇರಿ ವಿಶ್ವವಿದ್ಯಾಲಯ<br>15. ಕರ್ನಾಟಕ ಜಾನಪದ ವಿಶ್ವವಿದ್ಯಾಲಯ |
| 8 | ಬಾಗಲಕೋಟೆ | 16. ಬಾಗಲಕೋಟೆ ವಿಶ್ವವಿದ್ಯಾಲಯ |
| 9 | ಕೊಪ್ಪಳ | 17. ಕೊಪ್ಪಳ ವಿಶ್ವವಿದ್ಯಾಲಯ |
| 10 | ಕಲಬುರಗಿ | 18. ಗುಲಬರ್ಗಾ ವಿಶ್ವವಿದ್ಯಾಲಯ |
| 11 | ಮಂಡ್ಯ | 19. ಮಂಡ್ಯ ವಿಶ್ವವಿದ್ಯಾಲಯ |
| 12 | ಮೈಸೂರು | 20. ಮೈಸೂರು ವಿಶ್ವವಿದ್ಯಾಲಯ<br>21. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ<br>22. ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ |
| 13 | ದಾವಣಗೆರೆ | 23. ದಾವಣಗೆರೆ ವಿಶ್ವವಿದ್ಯಾಲಯ |
| 14 | ರಾಯಚೂರು | 24. ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ |

| | | |
|---|---|---|
| 15 | ಬೀದರ್ | 25. ಬೀದರ್ ವಿಶ್ವವಿದ್ಯಾಲಯ |
| 16 | ಕೊಡಗು | 26. ಕೊಡಗು ವಿಶ್ವವಿದ್ಯಾಲಯ |
| 17 | ಮಂಗಳೂರು | 27. ಮಂಗಳೂರು ವಿಶ್ವವಿದ್ಯಾಲಯ |
| 18 | ಶಿವಮೊಗ್ಗ | 28. ಕುವೆಂಪು ವಿಶ್ವವಿದ್ಯಾಲಯ |
| 19 | ಧಾರವಾಡ | 29. ಕರ್ನಾಟಕ ವಿಶ್ವವಿದ್ಯಾಲಯ |
| 20 | ವಿಜಯಪುರ | 30. ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ |
| 21 | ಚಾಮರಾಜನಗರ | 31. ಚಾಮರಾಜನಗರ ವಿಶ್ವವಿದ್ಯಾಲಯ |
| 22 | ಹಾಸನ | 32. ಹಾಸನ ವಿಶ್ವವಿದ್ಯಾಲಯ |